ಕರ್ನಾಟಕ ಸರ್ಕಾರ
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ,
ಲೋಕೋಪಯೋಗಿ ಇಲಾಖೆ, ಮಂಗಳೂರು ಉಪವಿಭಾಗ, ಮಂಗಳೂರು

ISO 9001:2015: Certified Organisation
ISO 14001-2015: Certified Organisation
Website: http:#www.kpwd.gov.in

ದೂರವಾಣಿ / ಫ್ಯಾಕ್ಸ್ ಸಂಖ್ಯೆ : 0824-2980964
ಇ-ಮೇಲ್ : aeepwdmng@kpwd.gov.in

ನಂ:ಸಕಾಇಂ :ಲೋಇ: ಉವಿ::ಮಂ:ಕಟ್ಟಡ ಸುರಕ್ಷತೆ: ಯೆನಪೋಯ /ತಾಶಾ/ 2024-25/1890 ದಿನಾಂಕ: 15/10/2024

ಇವರಿಗೆ:

ಪ್ರಾಂಶುಪಾಲರು,
ಯೆನಪೋಯ ಶಾಲೆ
ಜೆಪ್ಪಿನಮೊಗರು, ಮಂಗಳೂರು-575009.

ಮಾನ್ಯರೇ,

ವಿಷಯ:- ಯೆನಪೋಯ ಶಾಲಾ ಕಟ್ಟಡದ ಸುರಕ್ಷತೆಯ ಪ್ರಮಾಣ ಪತ್ರವನ್ನು ನೀಡುವ ಕುರಿತು.

ಉಲ್ಲೇಖ:-
1. ತಮ್ಮ ಪತ್ರ ಪತ್ರ ದಿನಾಂಕ 07.10.2024.
2. ಸರಕಾರದ ಸುತ್ತೋಲೆ ಸಂಖ್ಯೆ :- ಲೋಇ:59:ಬಿಇಡಿ:2019 ದಿನಾಂಕ: 10.11.2021 ಮತ್ತು ತಿದ್ದುಪಡಿ: ಲೋಇ:59:ಬಿಇಡಿ:2019 ದಿನಾಂಕ: 20.11.2021.
3. ಸರಕಾರದ ಸುತ್ತೋಲೆ ಸಂಖ್ಯೆ :- ಲೋಇ:59:ಬಿಇಡಿ:2019 ದಿನಾಂಕ: 07.05.2022

********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ವೈಎಂಕೆ ಚಾರಿಟೇಬಲ್ ಟ್ರಸ್ಟ್ ಇವರ ಆಡಳಿತಕ್ಕೊಳಪಟ್ಟ ಮಂಗಳೂರು ತಾಲೂಕು ಜೆಪ್ಪಿನಮೊಗರುನಲ್ಲಿರುವ ಯೆನಪೋಯ ಶಾಲಾ ಕಟ್ಟಡದ ಸುರಕ್ಷತೆ ಬಗ್ಗೆ ದೃಢೀಕರಣ ಪತ್ರವನ್ನು ನೀಡುವಂತೆ ಕೋರಿ ಉಲ್ಲೇಖ(1)ರ ಪತ್ರದೊಂದಿಗೆ ಪಿ.ಎ. ಇಂಜಿನಿಯರಿಂಗ್ ಕಾಲೇಜು, ನಡುಪದವು, ಮಂಗಳೂರು ಇವರಿಂದ Non Destuctive Test ಪರೀಕ್ಷಾ ವರದಿಯನ್ನು ಹಾಗೂ ಅಗ್ನಿಶಾಮಕ ಇಲಾಖೆಯಿಂದ Fire Safety Certificate ಪಡೆದು ಸಲ್ಲಿಸಿರುತ್ತೀರಿ. ಉಲ್ಲೇಖ(3) ರ ಸರಕಾರದ ಸುತ್ತೋಲೆ ಪ್ರಕಾರ ಸದ್ರಿ ಕಟ್ಟಡವನ್ನು ಶಾಖಾಧಿಕಾರಿಯವರು ಪರಿವೀಕ್ಷಣೆ ನಡೆಸಿ ಸದ್ರಿ ಕಟ್ಟಡವು ನೆಲ ಅಂತಸ್ತು, ಒಂದನೇ ಅಂತಸ್ತು ಹಾಗೂ ಎರಡನೇ ಅಂತಸ್ತುಗಳನ್ನು ಹೊಂದಿರುತ್ತದೆ. ಹಾಗೂ ಸದೃಢವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ ಎಂದು ವರದಿಯನ್ನು ನೀಡಿರುತ್ತಾರೆ.

ಉಲ್ಲೇಖ(3)ರನ್ವಯ ಶಾಲಾ/ಕಾಲೇಜು ಕಟ್ಟಡದ ಸುರಕ್ಷತೆಯ ಪ್ರಮಾಣ ಪತ್ರವನ್ನು ಪಡೆಯಲು ನಿಗಧಿತ ಶುಲ್ಕವಾದ ರೂ. 5000.00ಗಳನ್ನು ಖಜಾನೆ ಚಲನ್ ಸಂಖ್ಯೆ:- CR1024005900063630 ರಲ್ಲಿ ದಿನಾಂಕ: 07.10.2024 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಂಗಳೂರು ಶಾಖೆ, ಮಂಗಳೂರು ಇಲ್ಲಿ ಪಾವತಿಸಿರುತ್ತೀರಿ. ಅದರಂತೆ ಉಲ್ಲೇಖ (3) ರನ್ವಯ ಪಿ.ಎ. ಇಂಜಿನಿಯರಿಂಗ್ ಕಾಲೇಜು, ನಡುಪದವು, ಮಂಗಳೂರು ಇವರ ವರದಿಯಂತೆ ಮಂಗಳೂರು ತಾಲೂಕು ಜೆಪ್ಪಿನಮೊಗರುನಲ್ಲಿರುವ ಯೆನಪೋಯ ಶಾಲಾ ಕಟ್ಟಡವು ಸದೃಢವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ ಹಾಗೂ 2024-25ನೇ ಸಾಲಿನಲ್ಲಿ ತರಗತಿ ನಡೆಸಲು ಯೋಗ್ಯವಾಗಿರುತ್ತದೆಯೆಂದು ದೃಢೀಕರಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ
ನಂ.1 ಉಪ ವಿಭಾಗ ಮಂಗಳೂರು.

Principal
The Yenepoya School
Jeppinamogaru
Mangaluru - 575 009